<u>ಕರ್ನಾಟಕ ಲೋಕಾಯುಕ್ತ</u>

ನಂ:ಕಂ.ಲೋಕ್.ಬಿಸಿಡಿ 2515/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:27/06/2019

ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು ಸುಬ್ರಮಣ್ಯಪುರ ಕೆರೆಗೆ ಸಂಬಂದಪಟ್ಟಂತೆ ದಿನಾಂಕ: 20-06-2019 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ತಾವು ಕೈಗೊಂಡ ವರದಿಯನ್ನು ಸಲ್ಲಿಸತಕ್ಕದ್ದು.

ಮುಂದುವರೆದು ದಿ;23-08-2019 ರಂದು 3-00 ಗಂಟೆಗೆ ಪ್ರಕರಣದ ವಿಚಾರಣೆಯನ್ನು ನಿಗಧಿಪಡಿಸಿದೆ.

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

29/6

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

To:

1) The C.E.O., Namma Bangalore foundation, 2nd floor, No54, Rockline centre, Richmond Road, Bangalore.

2) Sri.Linge Gowda, Assistant Executive Engineer, BBMP,(Lakes) Bangalore.

3) Sri. Kumar Eshwar, A.E.E. Karnataka Slum Development Board, Bangalore 9845152350

4) Sri.Rajashekar, Additional Chief Engineer, BWSSB, Bangalore. 9845694593

5) 5) The Secretary, Karnataka Pollution control Board, church street, Bangalore

# KARNATAKA LOKAYUKTA, BENGALURU

No:Compt/LOK/BCD-2515/2018 Date : 20-06-2019

## ORDER.

On behalf of the complainant Sri Suresh N.R., Sri Babu and Sri Lakshmikanth are present. They have submitted a note dated 20-06-2019 pointing out the work required to be carried out by the concerned authorities of the state. Along with the note certain photographs are enclosed setting out the position of the lake. It is useful to extract the note dated 20-06-2019, which reads as follows:

> "ವಿಷಯ :ಸುಬ್ರಮಣ್ಯಾಪುರಕೆರೆಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ
> ಉಲ್ಲೇಖ: ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆComp/
> Lok/BCD-2515/2018.
>
> 1. ದಿನಾಂಕ 18-06-2019ರಂದು ಸುಬ್ರಮಣ್ಯಾಪುರಕೆರೆಗೆಯುನೈಟೆಡ್ ಬೆಂಗಳೂರು ಸದಸ್ಯರು ಭೇಟಿ ನೀಡಿಕೆರೆಅಭಿವೃದ್ಧಿಯನ್ನು ಪರಿಶೀಲಿಸಲಾಯಿತು. ಸ್ಥಿತಿಗತಿ ವಿವರಿಸುವ ಫೋಟೋಗಳನ್ನು ಲಗತ್ತಿಸಲಾಗಿದೆ.
>
> 2. ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಸುಬ್ರಮಣ್ಯಾಪುರಕೆರೆಯು ಬೆಂಗಳೂರು ದಕ್ಷಿಣತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಸರ್ವೇ ನಂ 64 ಮತ್ತುಮಾರಸಂದ್ರಗ್ರಾಮದಸರ್ವೇ ನಂ 6ರಲ್ಲಿಒಟ್ಟು25 ಎಕರೆ6ಗುಂಟೆ ವಿಸ್ತೀರ್ಣವನ್ನು ಹೊಂದಿದೆ.
>
> 3. ಪರೀಶಿಲನೆಯಲ್ಲಿ ಗಮನಿಸಿದಂತೆ ಕೇವಲ 6 ಎಕರೆ ವಿಸ್ತೀರ್ಣದಲ್ಲಿ ಮಾತ್ರಕೆರೆಯನ್ನುಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಕಂಡುಬರುತ್ತಿದೆ. ಕೆರೆಯಲ್ಲಿರುವ ಒತ್ತುವರಿಯನ್ನು ತೆರವುಗೊಳಿಸದೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಒತ್ತುವರಿದಾರರಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆಗಳನ್ನು ಈಗಾಗಲೇ ನಿರ್ಮಿಸಲಾಗಿದ್ದು, ಒತ್ತುವರಿದಾರರನ್ನು ಶೀಘ್ರ ಸ್ಥಳಾಂತರಿಸಲು ತಾವು ದಿನಾಂಕ 05-02-2019 ರಂದು ಮತ್ತು 12-12-2109 (Comp/LokBCD-2515/2018) ಆದೇಶನೀಡಿರುತ್ತೀರಿ. ಆದರೆ ಇದುವರೆಗೂ ಒತ್ತುವರಿದಾರರನ್ನು ಸ್ಥಳಾಂತರಿಸಿರುವುದಿಲ್ಲ. ಹಾಗಾಗಿ ಶೀಘ್ರ ಒತ್ತುವರಿದಾರರನ್ನು ಸ್ಥಳಾಂತರಿಸಬೇಕಾಗಿ ವಿನಂತಿಸುತ್ತೇವೆ.

4. ಕೆರೆಗೆ ಕೊಳಚೆ ನೀರು ಹರಿದು ಬರುತ್ತಿರುವುದನ್ನು ತಡೆಗಟ್ಟಬೇಕಾಗಿ ಮತ್ತು ಮಳೆ ನೀರು ಮಾತ್ರ ಕೆರೆಗೆ ಹರಿದು ಬರುವಂತೆ ಮಾಡಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವುಆದೇಶ ನೀಡಬೇಕೆಂದುತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.”

2. Copy of the above note is handed over to ~~Sri Kumar Eashwar, Assistant Executive Engineer,~~ Karnataka Slum Development Board and Sri Lingegowda, Assistant Executive Engineer, BBMP, Lakes.

3. Sri C.E.Thimmaiah, Assistant Commissioner of Police, South Traffic, Bengaluru is present. He submits that the Police have given ‘No Objection Certificate’ for the purpose of carrying out UGD work. The statement made by the Assistant Commissioner of Police, South Traffic, is placed on record.

4. On behalf of BWSSB Sri Rajashekar, Additional Chief Engineer is present. Sri Rajashekhar submitted that, since he and other engineers were fully engaged in election duty, none of them were present on the last date of hearing. He explained the

absence of himself and other engineers of BWSSB on the last occasion. The explanation submitted by Sri Rajashekhar for his absence and absence of other engineers is accepted as genuine and not intentional. He has filed a status report dated 19-06-2019, which reads as follows:

"ವಿಷಯ:-ಕರ್ನಾಟಕ ಲೋಕಾಯುಕ್ತ ಬಹುಮಹಡಿ ಕಟ್ಟಡ ಬೆಂಗಳೂರು
ಸುಬ್ರಮಣ್ಯಪುರ ಕೆರೆ ಅಂಗಳದಲ್ಲಿ ವಾಸಿಸುತ್ತಿರುವ ಜನಗಳಿಗೆ
ಕೊಳಚೆ ನಿರ್ಮೂಲನ ಮಂಡಲಿ ನಿರ್ಮಿತ ಮನೆಗಳಿಗೆ ಬೆಂಗಳೂರು
ಜಲಮಂಡಲಿ ವತಿಯಿಂದ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಬಗ್ಗೆ.

ಉಲ್ಲೇಖ:- 1. No.Compt/Lok/BCD-2515/2018/ARE-1
Dt:16.04.2019.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ಲೋಕಾಯುಕ್ತರ ಆದೇಶದ ಮೇರೆಗೆ, ಬೆಂಗಳೂರು ಜಲಮಂಡಲಿ ವತಿಯಿಂದ ಈಗಾಗಲೇ ಕೊಳಚೆ ನಿರ್ಮೂಲನ ಮಂಡಲಿ ವತಿಯಿಂದ ನಿರ್ಮಿಸಿರುವ ವಸತಿ ಗೃಹಗಳಿಗೆ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ನಿಟ್ಟಿನಲ್ಲಿ ಒಟ್ಟು 650 ಮೀಟರ್ ಉದ್ದದ ಕೊಳವೆ ಮಾರ್ಗದ ಕಾಮಗಾರಿಯಲ್ಲಿ 570 ಮೀಟರ್ ಕೊಳವೆಗಳನ್ನು ಡಿಸೆಂಬರ್ – 2018ರಲ್ಲಿಯೇ ಅಳವಡಿಸಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಸಂಚಾರ ಮತ್ತು (ಕಾನೂನು ಮತ್ತು ಸುವ್ಯವಸ್ಥೆ) ಪೊಲೀಸ್ ಸಿಬ್ಬಂದಿಯ ಸೂಕ್ತ ರಕ್ಷಣೆಯೊಂದಿಗೆ ದಿನಾಂಕ: 13.05.2019ಕ್ಕೆ ಬಾಕಿ ಉಳಿದಿದ್ದ 80 ಮೀಟರ್ ಉದ್ದದ ಕೊಳವೆ ಮಾರ್ಗವನ್ನು ಸಹ ಪ್ರಾರಂಭಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ.

ಬೆಂಗಳೂರು ಜಲಮಂಡಲಿ ಕಾಯ್ದೆ – 1964 ರ ಅನ್ವಯ ನಿಯಮ–5.2 & ನಿಯಮ–5.3 ರ ಪ್ರಕಾರ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಲಿಯು ನಿರ್ಮಿಸಿರುವ ಸದರಿ ವಸತಿ ಗೃಹ ಸಮುಚ್ಚಯಕ್ಕೆ ಆನ್‌ಲೈನ್ ಮುಖಾಂತರ ಬೆಂಗಳೂರು ಜಲ ಮಂಡಲಿಗೆ ಅರ್ಜಿ ಸಲ್ಲಿಸಿ, ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಪಡೆಯಬಹುದಾಗಿದೆ ಎಂದು ತಿಳಿಸಿದ್ದು, ಹಾಗೂ ಬೆಂಗಳೂರು ಜಲಮಂಡಲಿಯು ದಿನಾಂಕ:19.11.2018 ರಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಲಿಯಿಂದ ವಿವಿಧ ಕೊಳಗೇರಿಗಳಲ್ಲಿ ನಿರ್ಮಿಸಿರುವ ಮನೆಗಳ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ದಾಮಾಶ ಶುಲ್ಕದ ದರವನ್ನು ಮಾರ್ಪಡು ಮಾಡಲಾಗಿದ್ದು, ಪ್ರಸ್ತಾಪಿತ ರಿಯಾಯಿತಿ ದಾಮಾಶ ಶುಲ್ಕವನ್ನು ಪರಿಗಣಿಸಿ ಬೆಂಗಳೂರು ಜಲಮಂಡಲಿ ಕಾಯ್ದೆ – 1964 ರ ಅನ್ವಯ ನಿಯಮ–5.2 & ನಿಯಮ–5.3 ರ ಪ್ರಕಾರ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಲಿಯು ನಿರ್ಮಿಸಿರುವ ಸದರಿ ವಸತಿ ಗೃಹ ಸಮುಚ್ಚಯಕ್ಕೆ ಆನ್‌ಲೈನ್

ಮುಖಾಂತರ ಬೆಂಗಳೂರು ಜಲ ಮಂಡಲಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿರುತ್ತದೆ ಎಂದು ತಮ್ಮ ಆಧ್ಯ ಗಮನಕ್ಕೆ ತರಲಾಗಿದೆ.

ಜಲಮಂಡಲಿಯ ಅಧಿಕಾರಿಗಳು / ಅಭಿಯಂತರರು ಲೋಕಸಭಾ ಚುನಾವಣಾ ಕರ್ತವ್ಯದಲ್ಲಿ ಪಾಲ್ಗೊಂಡಿದ್ದರಿಂದ ದಿನಾಂಕ: 16.04.2019 ರಂದು ನಡೆದ ಪ್ರಕರಣದ ವಿಚಾರಣೆಗೆ ಯಾರೊಬ್ಬರು ಹಾಜರಾಗಲು ಸಾಧ್ಯವಾಗಿರುವುದಿಲ್ಲವೆಂದು ತಮ್ಮ ಆದ್ಯ ಗಮನಕ್ಕಾಗಿ ಸಲ್ಲಿಸಲಾಗಿದೆ."

5. On behalf of BBMP Sri Lingegowda, Assistant Executive Engineer, Lakes is present. He has filed a status report dated 19-06-2019 along with certain photographs. It is useful to extract the said status report, which reads as follows:

"ವಿಷಯ: ಶ್ರೀ. ಹೆಚ್.ಎಸ್. ದೊರೆಸ್ವಾಮಿ, ಬೆಂಗಳೂರು ರವರು ಘನ ಲೋಕಾಯುಕ್ತರವರಲ್ಲಿ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವ ಕುರಿತು.

ಉಲ್ಲೇಖ: 1.ತಮ್ಮ ಕಛೇರಿ ಪತ್ರ ಸಂಖ್ಯೆ:ಕಂ.ಲೋಕ್.ಬಿಸಿ.ಡಿ/2515/2018, ದಿ:30-04-2019 ರ ನೋಟೀಸ್.

*****

ಮೇಲ್ಕಂಡ ವಿಷಯಕ್ಕೆ ಹಾಗೂ ಉಲ್ಲೇಖ ಪತ್ರಕ್ಕೆ ಸಂಬಂಧಿಸಿದಂತೆ, ಶ್ರಿ ಹೆಚ್.ಎಸ್. ದೊರೆಸ್ವಾಮಿ, ಬೆಂಗಳೂರು ರವರು ಘನ ಲೋಕಾಯುಕ್ತರವರಲ್ಲಿ ದೂರನ್ನು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ರವರು ಸೂಚಿಸಿರುವ ಮೇರೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೆರೆ ವಿಭಾಗದಿಂದ ಮಾಹಿತಿಯನ್ನು ಈ ಕೆಳಗಿನಂತೆ ಸಲ್ಲಿಸಿದೆ.

ಸುಬ್ರಮಣ್ಯಪುರ ಕೆರೆಯನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದ್ದು, ಕೆರೆಯಲ್ಲಿ ಕೊಳಚೆ ನೀರು ತಿರುವುಗಾಲುವೆ ನಿರ್ಮಾಣ, ಪೈಪ್ ಲೈನ್ ನಿರ್ಮಾಣ, ಕೆರೆಯ ಹೂಳು ತೆಗೆಯುವುದು, ಐಲ್ಯಾಂಡ್ ನಿರ್ಮಾಣ, ರಿಂಗ್ ಬಂಡ್ ನಿರ್ಮಾಣ, ಮುಖ್ಯ ಏರಿಯನ್ನು ಬಲಪಡಿಸುವುದು, ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ಪೈಕಿ ಕೆರೆಯ ಏರಿಗೆ ಕಲ್ಲುಹಾಸು ಹೊದಿಸುವುದು, ಸಿಲ್ಟ್ ಟ್ರ್ಯಾಪ್ ನಿರ್ಮಾಣ, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಪ್ರಸ್ತುತ ಸುಬ್ರಮಣ್ಯಪುರ ಕೆರೆಯಲ್ಲಿ ಮಳೆ ನೀರು ಸಂಗ್ರಹಿಸಲು ಅಗತ್ಯವಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕೆರೆಯಲ್ಲಿ ಮಳೆ ನೀರು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. (ಛಾಯಚಿತ್ರಗಳನ್ನು ಘನ ನ್ಯಾಯಾಲಯದ ಅವಗಾಹನೆಗೆ ಸಲ್ಲಿಸಿದೆ). ಉಳಿದ ಕಾಮಗಾರಿಗಳಾದ ಫುಟ್‌ಬ್ರಿಡ್ಜ್ ನಿರ್ಮಾಣ, ವಾಕಿಂಗ್ ಪಾತ್ ಅಭಿವೃದ್ಧಿ, ಕಾವಲುಗಾರರ ಕೊಠಡಿ ನಿರ್ಮಾಣ, ಶೌಚಾಲಯ ನಿರ್ಮಾಣ, ಗಿಡಗಳಿಗೆ ನೀರುಣಿಸಲು ಪೈಪ್ ಲೈನ್ ಅಳವಡಿಸುವುದು, ಗೆಜೆಬೋ ನಿರ್ಮಾಣ, ಮತ್ತಿತ್ತರ ಅವಶ್ಯ ಕಾಮಗಾರಿಗಳನ್ನು ಕೈಗೊಳ್ಳಲು ಪಾಲಿಕೆಯಿಂದ ಈಗಾಗಲೇ ಟೆಂಡರ್ ಕರೆಯಲಾಗಿದೆ. (ಟೆಂಡರ್ ನೋಟಿಫಿಕೇಶನ್ ಪ್ರತಿ ಸಲ್ಲಿಸಿದೆ).

ಸುಬ್ರಮಣ್ಯಪುರ ಕೆರೆಯ ಪ್ರದೇಶದಲ್ಲಿರುವ ಅನಧಿಕೃತ ಒತ್ತುವರಿದಾರರನ್ನು ಸ್ಲಂ ಬೋರ್ಡ್ ವತಿಯಿಂದ ಪುನರ್ ವಸತಿ ಕಲ್ಪಿಸಿದ ನಂತರ ಸದರಿ ಒತ್ತುವರಿ ಪ್ರದೇಶವನ್ನು ಕೆರೆಗೆ ಸೇರಿಸಿಕೊಂಡು ತಂತಿಬೇಲಿಯನ್ನು ಅಳವಡಿಸಿ, ಈ ಪ್ರದೇಶದಲ್ಲಿ ಅವಶ್ಯ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುವುದು ಎಂಬ ವರದಿಯನ್ನು ಘನ ನ್ಯಾಯಾಲಯದ ಅವಗಾಹನೆಗೆ ಛಾಯಚಿತ್ರಗಳೊಂದಿಗೆ ಸಲ್ಲಿಸಿದೆ."

6. The photographs produced along with the status report indicate that, the work has been carried out by the BBMP.

7. On behalf of Karnataka Slum Development Board Sri Kumar Eashwar, Assistant Executive Engineer is present. He has also filed a status report dated 17-06-2019, which reads as follows:

"**ವಿಷಯ:-** ಎಚ್.ಎಸ್.ದೊರೆಸ್ವಾಮಿ ಎಂಬುವರು. ಲೋಕಾಯುಕ್ತ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

ಉಲ್ಲೇಖ:- **01)** ದಿನಾಂಕ: 16.04.2019 ರಂದು ಮಾನ್ಯ ಲೋಕಾಯುಕ್ತರ ಸಭೆಗುಲ್ಲಿ ನೀಡಿರುವ ನಿರ್ಧೇಶನ.

02) ಕಾರ್ಯಪಾಲಕ ಅಭಿಯಂತರರು, ( &ಯೋ) ನಂ:12, ಬೆಂ.ಜ.ಮಂ, ಆನಂದರಾವ್ ವೃತ್ತ, ಬೆಂಗಳೂರು ರವರ ಪತ್ರ ಸಂಖ್ಯೆ:BWSSB/EE(M&P)-12, AEE(M&P) 12-2/AE/75/2019-20, ದಿ:25.05.2019

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೆಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರದ ಉತ್ತರಹಳ್ಳಿ ವ್ಯಾಪ್ತಿಯಲ್ಲಿರುವ ಸುಬ್ರಮಣ್ಯಪುರ ಕೆರೆಗೆ ಸಂಬಂದಿಸಿದಂತೆ ಮಾನ್ಯ ಲೋಕಾಯುಕ್ತರ ಘನ ಉಪಸ್ಥಿತಿಯಲ್ಲಿ ದಿನಾಂಕ:16.04.2019 ರಂದು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸುಬ್ರಮಣ್ಯಪುರ ಕೆರೆಯಂಗಳದಲ್ಲಿ ವಾಸಿಸುತ್ತಿರುವ ನಿವಾಸಿಗಳನ್ನು ಮಂಡಳಿ ನಿರ್ಮಿತ ಮನೆಗಳಿಗೆ ಸ್ಥಳಾಂತರಿಸುವ ಬಗ್ಗೆ ಮಾನ್ಯ ಲೋಕಾಯುಕ್ತರು ವಿಚಾರಣೆ ನಡೆಸಿದ್ದು, ಬಾಕಿ ಉಳಿದ 80 ಮೀಟರ್ ಯು ಜಿ ಡಿ ಕಾಮಗಾರಿಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಆರು ವಾರಗಳಲ್ಲಿ ನಿರ್ವಹಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಅಧಿಕಾರಿಗಳು ಬಾಕಿ ಉಳಿದ 80 ಮೀಟರ್ ಯು.ಜಿ.ಡಿ ಕಾಮಗಾರಿಯನ್ನು ನಿರ್ವಹಿಸಲು ದಿನಾಂಕ: 13.05.2019 ರಂದು ನಿಗಧಿ ಪಡಿಸಿಕೊಂಡು ದಿನಾಂಕ:31.05.2019 ರಂದು Main line ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ ಎಂದು ಮೇಲಧಿಕಾರಿಗಳಿಗೆ ಬರೆದಿರುತ್ತಾರೆ. BWSSB Main line

ನಿಂದ ಬಡಾವಣೆಯ ಪೈಪ್‌ಲೈನ್‌ಗೆ ಸಂಪರ್ಕಗೊಳಿಸಲು ಗುಬ್ಬಲಾಳ ಮುಖ್ಯ ರಸ್ತೆಯ 20.00 ಮೀ ರಸ್ತೆ cutting ಮಾಡಬೇಕಾಗಿದ್ದು, ಮಂಡಳಿ ವತಿಯಿಂದ ದಿನಾಂಕ:12.06.2019 ರಂದು ಸ್ಥಳೀಯ ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು ಆನ್ ಲೈನ್‌ಭರ್ತಿ ಮಾಡಿ ಅನುಮತಿ ನೀಡುವಂತೆ ಕೋರಲಾಗಿದ್ದು ಶೀಘ್ರದಲ್ಲೇ 20.00 ಮೀ ಪೈಪ್ ಅಳವಡಿಸಿ ಪೈಪನ್ನು ಲಿಂಕ್ ಮಾಡಲಾಗುವುದು. ಒಳಚರಂಡಿ ಲಿಂಕ್‌ಮಾಡುವ ಕೆಲಸ ಪೂರ್ಣಗೊಂಡ ನಂತರ ಫಲಾನುಭವಿಗಳಿಗೆ ಮನೆ ಹಂಚಿಕೆ ಮಾಡಲಾಗುವುದು.

ಹೊರವಿದ್ಯುದ್ದೀಕರಣ ಕಾಮಗಾರಿಗೆ ಸಂಬಂದಿಸಿದಂತೆ Polework, transformer work ಇತ್ಯಾದಿ ಈಗಾಗಲೇ ಪೂರ್ಣಗೊಂಡಿದ್ದು, transformer charge ಮಾಡಲು ಪತ್ರ ವ್ಯವಹಾರ ಮಾಡಲಾಗಿದ್ದು, ಫಲಾನುಭವಿಗಳು ತಮ್ಮ ಹೆಸರಿಗೆ ಅರ್ಜಿ ಸಲ್ಲಿಸಿದ ನಂತರ ಶೀಘ್ರದಲ್ಲೇ ಲೈನ್ ಚಾರ್ಜ್ ಮಾಡಲಾಗುವುದು ಎಂದು ಬೆಸ್ಕಾಂ ಅಧಿಕಾರಿಗಳು ಸೂಚಿಸಿರುತ್ತಾರೆ, ಮಂಡಳಿಯಿಂದ ಹಂಚಿಕೆ ಮಾಡಿರುವ ಫಲಾನುಭವಿಗಳಿಗೆ ಸರ್ಕಾರದ ಆದೇಶ ಸಂಖೆ: ವ.ಇ 80 ಕೊಮಂಇ 2013 , ಬೆಂಗಳೂರು ದಿ:21 ನೇ ಜೂನ್ 2014 ರಂತೆ ಫಲಾನುಭವಿಗಳ ಹೆಸರಿನಲ್ಲೇ ಮೀಟರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ದಿನಾಂಕ:19.12.2018 ರಂದು ಬೆಸ್ಕಾಂ ಎಇಇ ರವರಿಗೆ ಪತ್ರ ಬರೆಯಲಾಗಿದ್ದು, ಶೀಘ್ರದಲ್ಲೇ ಮೀಟರ್ ಅಳವಡಿಸಲಾಗುವುದು.

ಮೇಲೆ ತಿಳಿಸಿರುವ ಎಲ್ಲಾ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ದಿ:15.07.2019 ರೊಳಗೆ ಕೆರೆಯಂಗಳದಲ್ಲಿರುವ 99 ನಿವಾಸಿಗಳನ್ನು ಸ್ಥಳಾಂತರಿಸಲು ಕ್ರಮ ವಹಿಸಲಾಗುವುದು.

ಈ ಎಲ್ಲಾ ವಿಷಯಗಳನ್ನು ತಮ್ಮ ಘನ ಅವಗಾಹನೆಗೆ ಸಲ್ಲಿಸಲಾಗಿದೆ."

8. Sri Kumar Eashwar submitted that, since the Police Department has given No Objection Certificate to lay down the UGD work, if the time is given till 15th July 2019, 99 (ninety nine) families occupying 99 (ninety nine) huts would be shifted to the flats allotted to them and the huts occupied by them would be forthwith demolished. The said statement is placed on record. Once the work is carried out and the flats are made suitable for occupation, it is needless to point out that, if any of the inmates of the huts, fail to occupy the flat, they will lose the

right on the flat and the authorities can forcibly evict them from the huts, if required by use of police force.

9. In the light of what is stated above, Sri Kumar Eashwar is given time till 15th July 2019 to shift the inmates of the 99 (ninety nine) huts.

10. All the parties are directed to file a status report with regard to the steps taken by the next date of hearing.

11. Communicate this order to the parties concerned.

**List this matter on 23-08-2019 at 03.00 p.m.**

20/6/2019

**(Justice P.Vishwanatha Shetty)**
Lokayukta, State of Karnataka

ck*

ARE-1)